

# ಕಸ್ತೂರ್‌ಬಾ v/s ಗಾಂಧಿ

■ ಬರಗೂರು ರಾಮಚಂದ್ರಪ್ಪ
ಕಲೆ: ಮನೋಹರ ಕೆ. ಆಚಾರ್ಯ

## ನಿಜವಾಯಿತು ಮದುವೆಯ ಆಟ

‘ಅಪ್ಪಂಗ್ ಹೇಳಿ ನಿಂಗ್ ಬೇರೆ ಯಾವ್ದಾದ್ರೂ ಕೆಲ್ಸ ಕೊಡುಸ್ತೀನಿ. ಹೇಗಿದ್ರು ನಮ್ಮಪ್ಪಂಗೆ ದಿವಾನ ಅಂತ ಅದೇನೊ ಒಂದ್ ಕೆಲ್ಸ ಇದೆ ರಾಜಕೋಟಲ್ಲಿ’ ಎಂದು ಗಾಂಧಿ ಸಂಭ್ರಮಿಸಿ ಹೇಳಿದಾಗ ಆ ಅಸ್ಪೃಶ್ಯ ತಣ್ಣಗೆ ಹೇಳಿದ:

‘ಅಂಥಾದ್ದೊಂದ್ ದಿನ ಬಂದ್ರೆ ನಮ್ ಪುಣ್ಯ. ಆದ್ರೆ ಸಮಾಜ ನಮ್ಮನ್ನ ಕುಲಕಸುಬು ಅಂತ ಇದೇ ಕೆಲ್ಸಕ್ ಇಟ್‌ಬಿಟ್ಟಿದೆ. ನೀವೊಬ್ರು ಹಿಂಗ್ ಹೇಳಿದ್ ಕೂಡ್ಲೆ ಸಮಾಜದೋರೆಲ್ಲ ಹಂಗೇ ಹೇಳಲ್ಲ ಸ್ವಾಮಿ. ನಿಮ್ಮಪ್ಪಾವ್ರನ್ನ ಕೇಳಿ ಆಮೇಲ್ ನನ್ ಬಯ್ಯಿಸ್‌ಬೇಡಿ. ಇರೊ ಈ ಕೆಲ್ಸಾನೂ ಕಳೀಬೇಡಿ.’

ಆತನ ಈ ಮಾತು ಕೇಳಿ ಗಾಂಧಿ ಮೌನ ವಹಿಸಿದ, ಚಿಂತಿಸಿದ. ಅಪ್ಪ ನನ್ ಮಾತು ಕೇಳೊಲ್ವ? ಕುಲಕಸುಬು ಅಂತ ಇವ್ರೆಲ್ಲ ನಮ್ಮ ಮಲ ತಲೆ ಮೇಲ್ ಹೊರ್ಬೇಕ? ಎಂಥ ಸಮಾಜ? ಎಂಥ ಸಂಪ್ರದಾಯ? ಈತನದು ಎಂಥ ಅಸಹಾಯಕತೆ! ಆತ ಅಸಹಾಯಕನಾದರೆ ತಾನೂ ಅಸಹಾಯಕನಾಗಬೇಕೆ? ತಾಯಿ ಬಳಿ ಒಮ್ಮೆ ಪ್ರಸ್ತಾಪಿಸಿಯೇ ಬಿಡುತ್ತೇನೆಂದು ತೀರ್ಮಾನಿಸಿದ. ಅಸ್ಪೃಶ್ಯನೆಂದು ಕರೆಯಲಾದವನ ಕೈಯನ್ನು ತನ್ನ ಎರಡೂ ಕೈಗಳಿಂದ ಒತ್ತಿ ಹಿಡಿದ. ತನಗರಿವಿಲ್ಲದಂತೆ ಕಣ್ಣಲ್ಲಿ ನೀರು ಬಂತು. ‘ನೀನು ಅಸ್ಪೃಶ್ಯ ಅಲ್ಲ, ಎಲ್ರಂತೆ ಮನುಷ್ಯ’ ಎಂದ. ಆತ ವಿಷಾದದಿಂದ ನಸುನಕ್ಕ. ‘ನಾನ್ ಬರ್ತೀನಿ, ಹೊತ್ತಾಯ್ತು’ ಎಂದು ಹೊರಟ.

ಇದೆಲ್ಲವನ್ನೂ ನೋಡುತ್ತಿದ್ದ ಕಸ್ತೂರ್ ಗಾಂಧಿಯನ್ನು ಕೇಳಿದಳು:

‘ಅಲ್ಲ, ಅವ್ನನ್ನ ನೀನ್ ಮುಟ್ಟಿಬಿಟ್ಟೆ?’

ಗಾಂಧಿ ಬೇಸರದಿಂದ, ‘ಯಾಕ್ ಮುಟ್ಟ ಬಾರದು?’ ಎಂದಾಗ ಕಸ್ತೂರ್ ಸುಮ್ಮನಾದಳು. ಮತ್ತೆ ಮುಂದುವರೆದು ‘ಅವರೂ ನಮ್ ಹಾಗೇ ಮನುಷ್ಯರು. ಬೇರೆ ದಾರಿ ಇಲ್ಲ ಅಂತ ಹೊಟ್ಟೆ ಪಾಡಿಗೆ ಈ ಕೆಲ್ಸ ಮಾಡ್ತಾರೆ’ ಎಂದವನೇ, ‘ಈಗ ಬಂದೆ ಇಲ್ಲೇ ಇರಿ’ ಎಂದು ಮನೆಯ ಒಳಗೆ ಹೋದ. ತಾಯಿಯ ಬಳಿ ಪ್ರಸ್ತಾಪಿಸಿದ. ‘ಆತನಿಗೆ ಅಪ್ಪನಿಗ್ ಹೇಳಿ ಬೇರೆ ಕೆಲ್ಸ ಕೊಡುಸ್ತೀಯ’ ಎಂದು ಕೇಳಿದ. ತಾಯಿ ಪುತಳೀ ಬಾಯಿ, ‘ಆಯ್ತಪ್ಪ, ಅವ್ನ್ ನಮ್ ಮನೆ ಬಿಟ್ಟು ಬೇರೆ ಕೆಲ್ಸಕ್ ಸೇರಿದ ಅಂತಿಟ್ಕೊ, ಆಗ ಮನೆಯವರೆಲ್ಲರ ಮಲ ನೀನ್ ಹೊರ್ತೀಯ?’ ಎಂದು ಕೇಳಿದಾಗ ಗಾಂಧಿ, ‘ಅವರವರದು ಅವರವರೇ ಚೊಕ್ಕಟ ಮಾಡ್ಲಿ’ ಎಂದ. ‘ನಮ್ ಮನೇಲ್ ಹೀಗ್ ಯಾರ್ ಮಾಡ್ತಾರೆ? ಆತನ್ನ ಈ ಮನೆಯಿಂದ ಬಿಡ್ಸಿದ್ರೂ ಬೇರೆ ಮನೆಯವರು ಸುಮ್ನಿರ್ತಾರ? ಅವ್ರ್ ಮನೇಗೆ ಆತ ಹೋಗ್ಲೇಬೇಕು. ಇಷ್ಟಕ್ಕೂ ನಿಮ್ಮಪ್ಪ ನಾನ್ ಹೇಳಿದ್ ಕೂಡ್ಲೆ ಕೇಳ್ ಬಿಡ್ತಾರ? ಸಮಾಜಕ್ಕೆ ಎದುರಾಗ್ತಾರ?’ ಎಂದು ಪುತಳೀ ಬಾಯಿ ಹೇಳಿದಾಗ ಗಾಂಧಿಗೆ ಇದು ವೈಯಕ್ತಿಕ ಸಮಸ್ಯೆಯಲ್ಲ, ಇಡೀ ಸಮಾಜದ ಸಮಸ್ಯೆ ಎಂದು ಅರಿವಾಗತೊಡಗಿತು; ಆದರೂ ಮನಸ್ಸು ಕಳವಳಕ್ಕೀಡಾಗಿತ್ತು. ಮೌನವಾಗಿ ಹೊರಬಂದ. ಕಸ್ತೂರ್, ‘ಯಾಕಿಂಗ್ ಪೆಚ್ಚು ಮೋರೆ ಹಾಕ್ಕಂಡಿದ್ದೀಯ? ಒಳಗೇನಾದ್ರೂ ಮಂಗಳಾರತಿ ಆಯ್ತ?’ ಎಂದು ತಮಾಷೆ ಮಾಡಿದಳು, ಗಾಂಧಿ ಸಿಡುಕಿನಿಂದ ನೋಡಿದ. ಗೆಳೆಯನೊಬ್ಬ ‘ನಿಮ್ ಜಟಾಪಟೀನೇ ಇವತ್ತಿನ್ ಆಟಾನೊ, ಬೇರೆ ಆಟ ಇದ್ಯೊ’ ಎಂದಾಗ ಎಲ್ಲರೂ ಹೊರಟರು.

ಆಟದ ಜಾಗಕ್ಕೆ ಹೋಗುತ್ತಿರುವಾಗ ಒಂದು ಹಾದಿಯಲ್ಲಿ ಗಿಡದ ಪೊದೆಗಳಿದ್ದವು ಅಕ್ಕಪಕ್ಕ. ಕಸ್ತೂರ್ ಬಾಗೆ ಗಾಂಧಿಯ ಮೌನ ಮುರಿಯಬೇಕು ಅನ್ನಿಸಿತು. ಆಕೆಗೆ ಒಂದು ವಿಷಯ ಗೊತ್ತಿತ್ತು. ಗಾಂಧಿಗೆ ಮೊದಲಿಂದಲೂ ಹಾವು ಕಂಡರೆ ಭಯ! ಅದನ್ನೇ ಇಲ್ಲಿ ಬಳಸಿ ಈ ಅಸಹನೀಯ ಮೌನ ಮುರಿಯಬೇಕು ಅಂತ ಒಳಗೇ ಲೆಕ್ಕಾಚಾರ ಹಾಕಿದಳು. ಸ್ವಲ್ಪದೂರ ಹೋದಮೇಲೆ ಇದ್ದಕ್ಕಿದ್ದಂತೆ ‘ಮೋಹನದಾಸ, ಹಾವು! ಹಾವು!’ ಎಂದಳು. ಮೋಹನದಾಸ ಗಾಂಧಿ ಬೆಚ್ಚಿದ, ‘ಎಲ್ಲಿ ಎಲ್ಲಿ?’ ಎಂದು ಥಟ್ಟನೆ ನಿಂತು ಬೆವರಿದ. ಕಸ್ತೂರ್ ‘ಅಲ್ಲಿ ಇಲ್ಲಿ’ ಎಂದು ಸುಖಾಸುಮ್ಮನೆ ತೋರಿಸಿದಳು. ಬರಬರುತ್ತಾ ಆತನಿಗಿದು ತಮಾಷೆ ಎಂದು ಅರ್ಥವಾಗಿ, ‘ತಮಾಷೆ ಮಾಡ್ತೀಯೇನೆ ತರ್ಲೆ’ ಎಂದು ಜಡೆ ಹಿಡಿದು ಎಳೆದ. ಕಸ್ತೂರ್ ಬಿಡಿಸಿಕೊಂಡು ಓಡಿದಳು. ನಗುತ್ತಾ, ಗಾಂಧಿ